# 'ಬಾಲ್ಯ'ದ ರಕ್ಷಾಕವಚ ಭದ್ರಪಡಿಸಿ

**ಮಕ್ಕಳು ಒಂದಲ್ಲ ಒಂದು ಬಗೆಯ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಲೈಂಗಿಕ ದೌರ್ಜನ್ಯ ನಡೆಸುವವರಲ್ಲಿ ಶೇ.50ರಷ್ಟು ಮಂದಿ ಮಗುವಿಗೆ ಪರಿಚಯದವರೇ ಆಗಿರುತ್ತಾರೆ ಎಂಬ ಆಘಾತಕಾರಿ ಅಂಶ ಈ ಅಧ್ಯಯನದಿಂದ ಹೊರಬಿದ್ದಿದೆ.**

ಮಕ್ಕಳಿಗೆ ತಾಯಿ– ತಂದೆಯ ಮಡಿಲು ಮತ್ತು ಮನೆಯನ್ನು ಹೊರತುಪಡಿಸಿದರೆ ಶಾಲೆಯೇ ಅತ್ಯಂತ ಸುರಕ್ಷಿತ ತಾಣ ಎಂಬ ನಂಬಿಕೆಯಿತ್ತು. ಇತ್ತೀಚಿನ ದಿನಗಳಲ್ಲಿ ಆ ನಂಬಿಕೆಯ ಬುನಾದಿಯೂ ಅಲುಗಾಡತೊಡಗಿದೆ. ಪುಟ್ಟ ಮಕ್ಕಳ ಮೇಲೆ ಶಾಲೆಯಲ್ಲೇ ನಡೆದಿವೆ ಎನ್ನಲಾದ ಅತ್ಯಾಚಾರ ಪ್ರಕರಣಗಳು 'ಜ್ಞಾನ ದೇಗುಲ'ಗಳ ಬಗ್ಗೆ ಜನರು ಇಟ್ಟಿದ್ದ ವಿಶ್ವಾಸ ಕಮರುವಂತೆ ಮಾಡಿವೆ. ಮಕ್ಕಳಿಗೆ ರಕ್ಷಕರಾಗಬೇಕಾದವರೇ ರಕ್ಕಸರಾಗಿ ಬದಲಾಗುತ್ತಿರುವ ರೀತಿ ಜನರ ಪ್ರಜ್ಞೆಯನ್ನು ಕಲಕಿದೆ.

ಬೆಂಗಳೂರಿನ ಪ್ರತಿಷ್ಠಿತ ಶಾಲೆಯೊಂದರಲ್ಲಿ ಆರು ವರ್ಷದ ಬಾಲಕಿ ಮೇಲೆ ನಡೆದ ಅತ್ಯಾಚಾರ ಆರೋಪದ ಪ್ರಕರಣ ರಾಜ್ಯದಲ್ಲಿ ಆಕ್ರೋಶದ ಅಲೆಯನ್ನೇ ಎಬ್ಬಿಸಿದೆ. ಕಾಮಪಿಶಾಚಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಪೋಷಕರು ಸ್ವಯಂಪ್ರೇರಿತರಾಗಿ ಬೀದಿಗೆ ಇಳಿದು ತಮ್ಮೊಳಗೆ ಮಡುಗಟ್ಟಿದ ಸಿಟ್ಟನ್ನು ಹೊರಹಾಕಿದ್ದಾರೆ. ಮಕ್ಕಳ ಸುರಕ್ಷತೆ ಕುರಿತಂತೆ ಜನರಲ್ಲಿ ಮೂಡಿರುವ ಆತಂಕದ ತೀವ್ರತೆಯನ್ನು ಈ ಪ್ರತಿಭಟನೆಗಳು ಬಿಂಬಿಸುತ್ತವೆ. ಇದನ್ನು ಯಾವುದೋ ಒಂದು ಶಾಲೆ, ಪ್ರದೇಶಕ್ಕೆ ಸೀಮಿತವಾದ ಬಿಡಿ ಘಟನೆ ಎಂದು ಪರಿಗಣಿಸುವಂತಿಲ್ಲ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿವೆ. ಮಲೆನಾಡು, ಕರಾವಳಿ, ಬಯಲುಸೀಮೆ ಎಂಬ ಭೇದವಿಲ್ಲದೆ ರಾಜ್ಯದ ಗ್ರಾಮಾಂತರ ಪ್ರದೇಶಗಳ ಸ್ಥಿತಿಯೂ ಯಾವುದೇ ನಗರ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ಮನೆ, ಶಾಲೆ, ವಿದ್ಯಾರ್ಥಿ ನಿಲಯ, ಬೀದಿ ಯಾವುದೂ ಮಕ್ಕಳಿಗೆ ಸುರಕ್ಷಿತವೆನಿಸದ ಸ್ಥಿತಿ ಸೃಷ್ಟಿಯಾಗಿದೆ. ಇದು ನಿಜಕ್ಕೂ ಆತಂಕಕಾರಿ.

ಮಕ್ಕಳಿಗೆ 'ಸುರಕ್ಷಿತ ಬಾಲ್ಯ' ಎಂಬುದು ಮರೀಚಿಕೆ ಆಗುತ್ತಿದೆಯೇನೊ ಎಂಬ ಅನುಮಾನ ಮೂಡಿದೆ. ವರದಿಯಾಗುತ್ತಿರುವ ದೌರ್ಜನ್ಯ ಪ್ರಕರಣಗಳು ಮತ್ತು ವಿವಿಧ ಅಧ್ಯಯನಗಳು ಈ ಶಂಕೆಯನ್ನು ಬಲಪಡಿಸುತ್ತವೆ. 'ಯೂನಿಸೆಫ್' ಮತ್ತು 'ಸೇವ್ ದ ಚಿಲ್ಡ್ರನ್' ಸಂಸ್ಥೆಗಳ ನೆರವಿನೊಂದಿಗೆ ಕೇಂದ್ರ ಮಹಿಳಾ ಮತ್ತು ಕಲ್ಯಾಣ ಸಚಿವಾಲಯವು 2007ರಲ್ಲಿ ನಡೆಸಿದ ಅಧ್ಯಯನದ ವರದಿಯನ್ನು ಅವಲೋಕಿಸಿದರೆ ಭಾರತದಲ್ಲಿ ಮಕ್ಕಳನ್ನು ಎಷ್ಟು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದೇವೆ ಎಂಬುದು ಮನವರಿಕೆಯಾಗುತ್ತದೆ. ಶೇಕಡ 53.22ರಷ್ಟು ಮಕ್ಕಳು ಒಂದಲ್ಲ ಒಂದು ಬಗೆಯ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಲೈಂಗಿಕ ದೌರ್ಜನ್ಯ ನಡೆಸುವವರಲ್ಲಿ ಶೇ 50ರಷ್ಟು ಮಂದಿ ಮಗುವಿಗೆ ಪರಿಚಯದವರೇ ಆಗಿರುತ್ತಾರೆ ಎಂಬ ಆಘಾತಕಾರಿ ಅಂಶ ಈ ಅಧ್ಯಯನದಿಂದ ಹೊರಬಿದ್ದಿದೆ.

ವಿಭಕ್ತ ಕುಟುಂಬ ವ್ಯವಸ್ಥೆ, ಗಂಡ–ಹೆಂಡತಿ ಇಬ್ಬರೂ ದುಡಿಯಬೇಕಾದ ಅನಿವಾರ್ಯ, ನಗರೀಕರಣ ಹಾಗೂ ಬದಲಾದ ಜೀವನ ಶೈಲಿಯಿಂದ ಬದುಕಿನ ಮೇಲೆ ಆಗುತ್ತಿರುವ ಒತ್ತಡ, ಮೌಲ್ಯಗಳಲ್ಲಿನ ಪಲ್ಲಟ ಇವೇ ಮೊದಲಾದ ಅಂಶಗಳು ಮಕ್ಕಳ ಬಾಲ್ಯದ ಮೇಲೂ ಅಡ್ಡಪರಿಣಾಮಗಳನ್ನು ಬೀರುತ್ತಿವೆ. ಮಕ್ಕಳ ಲಾಲನೆ– ಪಾಲನೆಯ ಹೊಣೆಯನ್ನು 'ಆಯಾ'ಗಳಿಗೆ ವಹಿಸಲಾಗುತ್ತಿದೆ. ಮನೆಗಿಂತ 'ಪ್ಲೇ ಹೋಮ್'ಗಳಲ್ಲೇ ಹೆಚ್ಚಿಗೆ ಇರಬೇಕಾದ ಸ್ಥಿತಿ ಉಂಟಾಗಿದೆ. ಶಾಲೆ, ಓದು, ಹೋಮ್ ವರ್ಕ್... ಎಳವೆಯಲ್ಲೇ ಮಕ್ಕಳಿಗೆ ಗಾಣದ ಎತ್ತಿನ ಹೊರೆ. ಅಂಕ ಗಳಿಕೆಯೇ ಪ್ರಧಾನವಾಗಿದೆ ಮತ್ತು ಬುದ್ಧಿಮತ್ತೆ ಅಳೆಯುವ ಸಾಧನವೂ ಆಗಿದೆ. ಮಕ್ಕಳ ಸಹಜ ಕುತೂಹಲ, ಆಸಕ್ತಿ, ಪ್ರತಿಭೆ ಅರಳಲು ಉತ್ತೇಜಕ ವಾತಾವರಣ ಸಿಗುತ್ತಿಲ್ಲ.

ಮಕ್ಕಳ ಹಕ್ಕುಗಳ ಬಗ್ಗೆ ಆಗೊಮ್ಮೆ ಈಗೊಮ್ಮೆ ಪ್ರಸ್ತಾಪವಾಗುತ್ತದೆ. ಆದರೆ ಪಾಲನೆ ಆಗುತ್ತಿಲ್ಲ. ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲೆಂದು ಶಾಸನ ರೂಪಿಸಲಾಗಿದೆಯಾದರೂ ಅದರ ಬಗ್ಗೆ ಬಹುಪಾಲು ಜನರಿಗೆ ಅರಿವಿಲ್ಲ. 2012ರಲ್ಲೇ 'ಲೈಂಗಿಕ ಅಪರಾಧಗಳಿಂದ ಮಕ್ಕಳಿಗೆ ರಕ್ಷಣೆ ಕಾಯ್ದೆ–2012' ಅನ್ನು ಜಾರಿಗೆ ತರಲಾಗಿದೆ. ಆದರೆ ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ನಿದರ್ಶನಗಳು ಕಾಣಸಿಗುವುದಿಲ್ಲ. ಮಕ್ಕಳ ಮೇಲೆ ನಡೆಯುವ ಎಲ್ಲ ಬಗೆಯ ಲೈಂಗಿಕ ಅಪರಾಧಗಳಿಗೆ ಈ ಕಾಯ್ದೆ ಸೂಕ್ಷ್ಮ ಸಂವೇದಿಯಾಗಿ ಸ್ಪಂದಿಸುತ್ತದೆ. ಈ ಕಾಯ್ದೆಯಡಿ ತನಿಖೆ ಮತ್ತು ವಿಚಾರಣಾ ಪ್ರಕ್ರಿಯೆ, ಮಕ್ಕಳ ಸ್ನೇಹಿಯೂ ಆಗಿದೆ. ಆದರೆ ಅತ್ಯಾಚಾರ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಪೊಲೀಸರ ಅಸೂಕ್ಷ್ಮತೆ ಪದೇ ಪದೇ ಬಹಿರಂಗವಾಗುತ್ತಲೇ ಇದೆ. ಈ ಕಾಯ್ದೆ ಕುರಿತು ಪೊಲೀಸ್ ಸಿಬ್ಬಂದಿಗೇ ಸರಿಯಾದ ತಿಳಿವಳಿಕೆ ಇದ್ದಂತಿಲ್ಲ. ಈ ಬಗ್ಗೆ ಪೊಲೀಸರಿಗೆ ಸಂವೇದನಾಶೀಲತೆಯ ತರಬೇತಿ ಅಗತ್ಯ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಶಿಕ್ಷಣ ಇಲಾಖೆ ಮಾರ್ಗಸೂಚಿ ರೂಪಿಸಿದೆ. ಮಾರ್ಗಸೂಚಿಯಿಂದಲೇ ಎಲ್ಲವೂ ಸರಿಹೋಗುತ್ತದೆ ಅಂತ ಭಾವಿಸಲಾಗದು. ಮಕ್ಕಳ ಮುಗ್ಧತೆ ಉಳಿಸಲು, ಅವರ ಹಕ್ಕು ರಕ್ಷಿಸಲು ಪೋಷಕರು, ಶಿಕ್ಷಕರು, ಶಾಲಾ ಆಡಳಿತ ಮಂಡಳಿಗಳು, ಪೊಲೀಸರು ಎಲ್ಲರೂ ಕೈಜೋಡಿಸಬೇಕು.

■ ಎನ್.ಉದಯಕುಮಾರ್


ಈಶ್ವರ್